| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 779/2021**

ಪಿ.ಡಬ್ಲು : 1 ಸಿ.ಡಬ್ಲು : 1

| | | |
|---|---|---|
| ಸಾಕ್ಷಿದಾರನ ಹೆಸರು | : | ನವೀನ್ ಸುವರ್ಣ |
| ತಂದೆಯ ಹೆಸರು | : | ಮಹಾಬಲ ಸುವರ್ಣ |
| ಪ್ರಾಯ | : | 34 ವರ್ಷ |
| ಉದ್ಯೋಗ | : | ಮುಖ್ಯಾಕಾರ್ಯನಿರ್ವಾಹಣಾಧಿಕಾರಿ, ಮಾಳ ಕೆರ್ವಾಶೆ ವ್ಯವಸಾಯ ಸಂಘ |
| ವಾಸ | : | ಕಾರ್ಕಳ |

ದಿನಾಂಕ 21.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಚಾಸಾ- 2 ಮತ್ತು 3 ರವರ ಪರಿಚಯ ಇದೆ ಅವರು ಶಾಖಾ ವ್ಯವಸ್ಥಾಪಕರು, ಚಾಸಾ-4 ಬ್ಯಾಂಕ್ ನ ಅಧ್ಯಕ್ಷರು.

ನಾನು 2014 ರಿಂದ 2017 ರವರೆಗೆ ನಾರಯಣಗುರು ಅರ್ಬನ್ ಕೋಪರೇಟಿವ್ ಬ್ಯಾಂಕ್ ನಲ್ಲಿ ಪ್ರಭಾರ ಮುಖ್ಯಾ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸಿರುತ್ತೇನೆ. 1 ಮತ್ತು 2 ನೇ ಆರೋಪಿತರು ಕಾರ್ಕಳದಲ್ಲಿ ಚಿನ್ನ ಮತ್ತು ಬೆಳ್ಳಿ ತಯಾರಿಕಾ ಘಟಕದ ಉದ್ಯಮವನ್ನು ನಡೆಸುತ್ತಿದ್ದರು. 3 ನೇ ಅರೋಪಿ ಕೆನರಾ ಬ್ಯಾಂಕ್ ನ ಕಾರ್ಕಳ ಶಾಖೆಯಲ್ಲಿ ಸಿಬ್ಬಂದಿಯಾಗಿದ್ದರು. ದಿಃ19.11.2014 ರಂದು 1 ನೇ ಆರೋಪಿ ನಮ್ಮ ಬ್ಯಾಂಕ್ ನ ಕಾರ್ಕಳ ಶಾಖೆಯಲ್ಲಿ ಅವರು ನಡೆಸುತ್ತಿದ್ದ ಉದ್ಯಮದಲ್ಲಿ

ಹೆಚ್ಚುವರಿ ಬಂಡವಾಳ ಹೂಡಿಕೆಗಾಗಿ ರೂ.19,00,000/- ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರು. ಸಾಲದ ಭದ್ರತೆಗಾಗಿ ಸಾಣೂರು ಗ್ರಾಮದ ಸ.ನಂ.160/4 ಪಿ14 ರಲಿಲರುವ 14.50 ಸೆಂಟ್ಸ್ ವಿಸ್ತೀರ್ಣದ ಆಸ್ತಿ ಮತ್ತು ಅದರಲಿಲರುವ ಕಟ್ಟಡವನ್ನು ಅಡಮಾನ ಮಾಡಲು ಅರ್ಜಿಯಲ್ಲಿ ತಿಳಿಸಿರುತ್ತಾರೆ. ಸಾಲಕ್ಕೆ 2 ಮತ್ತು 3 ನೇ ಆರೋಪಿತರು ಜಾಮೀನುದಾರರಾಗಿದ್ದರು. ದಿಃ24.12.2024 ರಂದು ಸದ್ರಿ ಸಾಲವನ್ನು ನಮ್ಮ ಬ್ಯಾಂಕ್ ನ ಕಾರ್ಯಕಾರಿ ಸಮಿತಿಯವರು ಮಂಜೂರು ಮಾಡಿರುತಾರೆ. ದಿಃ25.11.2014 ರಂದು ಸಾಲದ ಭದ್ರತೆಗಾಗಿ ಕೊಟ್ಟ ಸ್ಥಿರಾಸ್ತಿಯನ್ನು ಕಾರ್ಕಳ ಉಪನೊಂದಾಣಾಧಿಕಾರಿ ಕಚೇರಿಯಲ್ಲಿ ಅಡಮಾನ ಮಾಡಿಕೊಟ್ಟಿರುತ್ತಾರೆ. ದಿಃ26.11.2014 ರಂದು ಸಾಲ ಬಿಡುಗಡೆಯಾಗಿರುತ್ತದೆ. ದಿಃ05.12.2014 ರಂದು ಸದ್ರಿ ಸ್ಥಿರಾಸ್ತಿಯಲ್ಲಿ 5 ಸೆಂಟ್ಸ್ ವಿಸ್ತೀರ್ಣದ ಸ್ಥಿರಾಸ್ತಿ ಮತ್ತು ಅದರಲ್ಲಿರುವ ಕಟ್ಟಡವನ್ನು 1 ನೇ ಆರೋಪಿ 2 ನೇ ಆರೋಪಿಗೆ ವ್ಯವಸ್ಥಾಪತ್ರ ಮಾಡಿಕೊಟ್ಟಿರುತ್ತಾರೆ. ದಿಃ07.02.2015 ರಂದು 2 ನೇ ಆರೋಪಿ ತಮ್ಮ ಉದ್ಯಮದಲ್ಲಿ ಹೆಚ್ಚುವರಿ ಬಂಡವಾಳ ಹೂಡಿಕೆಗಾಗಿ ನಮ್ಮ ಶಾಖೆಯಲ್ಲಿ 19 ಲಕ್ಷಕ್ಕೆ ಸಾಲಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದ್ರಿ ಸಾಲವು ದಿಃ12.02.2015 ರಂದು ಕಾರ್ಯಕಾರಿ ಸಮಿತಿಯಲ್ಲಿ ಮಂಜುರಾಗಿರುತ್ತದೆ. ದಿಃ13.02.2015 ರಂದು 5 ಸೆಂಟ್ಸ್ ಸ್ಥಿರಾಸ್ತಿಯನ್ನು ಕಾರ್ಕಳ ಉಪನೊಂದಾಣಾಧಿಕಾರಿ ಕಚೇರಿಯಲ್ಲಿ ಅಡಮಾನ ಮಾಡಿಕೊಟ್ಟಿರುತ್ತಾರೆ. ದಿಃ14.02.2015 ರಂದು ಸಾಲ ಬಿಡುಗಡೆಯಾಗಿರುತ್ತದೆ. ಈ 2 ಸಾಲಗಳಲ್ಲಿ ಅಡಮಾನ ಮಾಡಿದ ದಾಖೆಗಳ ಮೂಲ ಪ್ರತಿಗಳು ಕಳೆದುಹೋಗಿವೆ ಎಂದು 1 ನೇ ಆರೋಪಿಯು ದಿಃ27.10.2014 ರಂದು ಕಾರ್ಕಳ ನಗರ ಠಾಣೆಗೆ ದೂರು ಸಲ್ಲಿಸಿರುತ್ತಾರೆ. ಕಳೆದು ಹೋದ ಬಗ್ಗೆ ದಿಃ29.10.2014 ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಣೆ ನೀಡಿರುತ್ತಾರೆ. ದಿಃ29.10.2014 ರಂದು ದಾಖಲೆಪತ್ರ ಕಳೆದುಹೋಗಿದೆ ಎಂದು ನೋಟರಿಯವರಿಂದ ಅಫಿದವಿತ್ ಮಾಡಿರುತ್ತಾರೆ. ಸಾಲಕ್ಕೆ ಅರ್ಜಿ ಸಲ್ಲಿಸಿಸುವ ಸಂದರ್ಭದಲ್ಲಿ ಈ 3 ದಾಖಲೆಗಳನ್ನು ಮತ್ತು ಸ್ಥಿರಾಸ್ತಿಗೆ ಸಂಬಂಧಿಸಿದ ದಾಖಲೆಗಳ ದೃಢಿಕೃತ ಪ್ರತಿಯನ್ನು ಬ್ಯಾಂಕ್ ಗೆ ಸಲ್ಲಿಸಿರುತ್ತಾರೆ. ಈ 2 ಸಾಲಗಳ ಬಗ್ಗೆ ನಮ್ಮ ಬ್ಯಾಂಕ್ ನ ಅಡಮಾನ ದಾಖಲಾತಿ ಇರುತ್ತದೆ. ಆ ಸಮಯದಲ್ಲಿ ಬೇರೆ ಬ್ಯಾಂಕ್ ನಲ್ಲಿ ಸಾಲ ಪಡೆದ ಬಗ್ಗೆ ಸದ್ರಿ ಸ್ಥಿರಾಸ್ತಿಯ ಪಹಣಿ ಪತ್ರಿಕೆಯಲ್ಲಿ ಮತ್ತು ಋಣಭಾರ ಪತ್ರದಲ್ಲಿ ನಮೂದು ಇರುವುದಿಲ್ಲ.

1 ನೇ ಆರೋಪಿಯು ನಮ್ಮ ಬ್ಯಾಂಕ್ ನಿಂದ ಸಾಲ ಪಡೆಯುವ ಮೊದಲಿ ಸದ್ರಿ ಸ್ಥಿರಾಸ್ತಿಯ ಮೂಲ ದಾಖಲೆಗಳನ್ನು ಹೆಚ್ ಡಿ ಎಫ್ ಸಿ ಬ್ಯಾಂಕ್ ಕಾರ್ಕಳದಲ್ಲಿ ಅಡಮಾನ ಮಾಡಿ ಸಾಲವನ್ನುಪಡೆದಿರುತ್ತಾರೆ. 1 ನೇ ಆರೋಪಿಯು ಸದ್ರಿ ಸಾಲದಲ್ಲಿ ರೂ.4,16,800/- ಮರುಪಾವತಿ ಮಾಡಿರುತ್ತಾರೆ. 2 ನೇ ಆರೋಪಿಯು ಅವರು ಪಡೆದ ಸಾಲದಲ್ಲಿ ರೂ.4,00,000/- ಮರುಪಾವತಿ ಮಾಡಿರುತ್ತಾರೆ. ನಮ್ಮ ಬ್ಯಾಂಕನ್ನು ವಂಚಿಸುವ ಉದ್ದೇಶದಿಂದ ಸ್ಥಿರಾಸ್ತಿಯ ಮೂಲಪ್ರತಿಗಳು ಕಳೆದುಹೋಗಿವೆ ಎಂದು ಸುಳ್ಳು ದೂರನ್ನು ಕಾರ್ಕಳ ನಗರ ಪೊಲೀಸ್ ಠಾಣೆಗೆ ನೀಡಿರುತ್ತಾರೆ. ದಿನಪತ್ರಿಕೆಯಲ್ಲಿ ಸುಳ್ಳು ಪ್ರಕಟಣೆಯನ್ನು ಪ್ರಕಟಿಸಿರುತ್ತಾರೆ. ಸುಳ್ಳು ಅಫಿದವಿತ್ ಮಾಡಿರುತ್ತಾರೆ. 1 ರಿಂದ 3 ನೇ ಆರೋಪಿತರು ಎಲ್ಲಾ ವಿಚಾರಗಳು ಗೊತ್ತಿದ್ದರು ಕೂಡ ಬ್ಯಾಂಕನ್ನು ವಂಚಿಸುವ ದೃಷ್ಟಿಯಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ 1 ಮತ್ತು 2 ನೇ ಆರೋಪಿತರು ತಲಾ ರೂ.19,00,000/- ಗಳನ್ನು ಸಾಲವಾಗಿ ಪಡೆದಿರುತ್ತಾರೆ. 1 ನೇ ಆರೋಪಿಯು ನಮ್ಮ ಬ್ಯಾಂಕ್ ಗೆ ರೂ.24,50,032/- ನ್ನು 2 ನೇ ಆರೋಪಿಯು ರೂ. 23,95,422/- ಗಳನ್ನು ವಂಚನೆ ಮಾಡಿರುತ್ತಾರೆ. ಈ ಬಗ್ಗೆ ತಿಳಿದ ಕೂಡಲೇ ದಿಃ25.07.2017 ರಂದು ಆಡಳಿತ ಮಂಡಳಿಯಲ್ಲಿ ಸದ್ರಿ 3 ಜನ ಆರೋಪಿತರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ಕುರಿತು ಕಾರ್ಕಳ ನಗರ ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸಲು ನನಗೆ ಅಧಿಕಾರ ಪತ್ರ ನೀಡಿರುತ್ತಾರೆ. ಅದರಂತೆ ನಾನು ದಿಃ06.10.2017 ರಂದು ಕಾರ್ಕಳ ನಗರ ಪೊಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತೇನೆ.

ದಿಃ12.10.2017 ರಂದು ಕಾರ್ಕಳ ನಗರ ಪೊಲೀಸ್ ಠಾಣೆಯವರು ದಾಖಲೆಗಳನ್ನು ಕೇಳಿದ್ದು, ದಿಃ 05.12.2014 ರಂದು 1 ನೇ ಆರೋಪಿಯು 2 ನೇ ಆರೋಪಿಗೆ ಮಾಡಿಕೊಟ್ಟ ಸ್ಥಿರಾಸ್ತಿಯ ವ್ಯವಸ್ಥಾಪತ್ರ, ಅಫಿದವಿತ್, ಅಧಿಕಾರ ಪತ್ರ, ಇಬ್ಬರು ಆರೋಪಿಗಳು ಪಡೆದ ಸಾಲದ ಸ್ಟೇಟ್ ಮೆಂಟನ್ನು ಹಾಜರುಪಡಿಸಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಉದಯ ನಾಯಕ್ ಹಾಜರಿದ್ದರು. ಪ್ರಕರಣ ಕುರಿತು ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ಪಿರ್ಯಾದಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಿರ್ಯಾದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ತನಗೆ ನೀಡಿದ ಅಧಿಕಾರಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಸಾಕ್ಷಿಯು ದಿಃ12.10.2017 ರ ದಾಖಲಾತಿ ಸ್ವಾಧೀನತಾ ಮಹಜರಿನಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ದಿಃ29.10.2014 ರ ಅಫಿದವಿತ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

ಸಾಕ್ಷಿಯು ವ್ಯವಸ್ಥಾಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

ಸಾಕ್ಷಿಯು ಸಾಲದ ಸ್ಟೇಟ್ ಮಂಟನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಮಾನ್ಯ ಸಸಅ ರವರು ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the CW 4 to 17. As the eye witness Pw to 3 have completly turned hostile to the case of prosecution. No purpose will be served by

issuance of summons to CW 4 to 17. Hence by rejecting the prayer of learned APP evidence of CW 4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for compliance and Arguments.

Call on 28-02-2024.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of

prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for compliance Under 437A and Arguments.

Call on : 17.08.2021

Prl. Civil Judge & JMFC.
Karkala